ಇದ್ದಿರಿ...'

'ಬಾಳೇಹೊನ್ನೂರಿಗೆ ಹೋಗಿಬರುತೀನಿ ಅಂತ ಹೊರಟೆ, ಮತ್ತೆ?'

'ಇಲ್ಲ, ಈಶ್... ಹೊರಟೆ. ಯಾಕೋ ಮನಸ್ಸು ಸರಿಯಿದೆ ಅನಿಸಲಿಲ್ಲ... ತಕ್ಷಣ ವಾಪಸು ಬಂದೆ...'

'ಸುಮ್ಮಸುಮ್ಮನೆ ಮನಸ್ಸೇಕೆ, ಕೆಡುತ್ತೋ ಹುಡುಗ?' ಶ್ರವಣನ ಬಳಿಸಾರಿ ತಲೆದಡವಿದೆ. ನನ್ನ ಕೈಕೊಡವುವ ಹಾಗೆ ಹಿಮ್ಮೆಟ್ಟಿದ. ಅವನ ಮೋರೆಯಳೆಯುವ ಹಾಗೆ ನೋಡಿದೆ. ಇಪ್ಪತ್ತೆಂಟು ವಯಸ್ಸಿನ ಹುಡುಗ. ದೊಡ್ಡ ದೊಡ್ಡ ಕಣ್ಣುಗಳು. ಕೆತ್ತಿ ತೀಡಿ ಮೊನಚು ತಿದ್ದಿದಂತನಿಸುವ ಚೂಪನೆ ಮೂಗು. ಹೆಗಲಿನವರೆಗೂ ಇಳಿಬೀಳುವ ಹಿಮ್ಮುಡಿಯ ಗುಂಗುರು. ಚೆನ್ನನಿಸಿದ. ಹೃಷಿಯೂ ಇವನ ವಯಸ್ಸಿನಲ್ಲಿ ಹೀಗೆಯೇ ಇದ್ದನಲ್ಲವೆ? ಮಗನ ನೆನಪಿನಲ್ಲಿ ಕಣ್ಣು ಪಸೆಗೂಡಿಕೊಂಡವು.

'ಯ್ಯ್... ಯಾಕೆ? ಬೇಜಾರಾಯಿತಾ?' ತಕ್ಷಣ ಸನಿಹಗೊಂಡು ವಿಚಾರಿಸಿದ.

'ಬೇಜಾರೇನಿಲ್ಲ... ನನ್ನ ಮಗನ ನೆನಪಾಯಿತು ಅಷ್ಟೆ...'

'ಛೇ... ನೀವು ನನ್ನನ್ನು ಮುದ್ದಿಸೋಕೆ ಬಂದಿರಲ್ಲ, ಕೊಸರಿಕೊಂಡಿದ್ದಕ್ಕೆ ಬೇಜಾರಾಯಿತೇನೋ ಅಂದುಕೊಂಡೆ...' ಅಂತನ್ನುತ್ತ, ಅನಾಮತ್ತಾಗಿ ನನ್ನ ಹೆಗಲು ಬಳಸಿ ಅಪ್ಪಿಕೊಂಡ. ನಾನೂ ಅವನ ಮೈಬಳಸಿ ತಡವಿದೆ. 'ಲವ್ಯೂ ಈಶ್... ಲವ್ಯೂ ಸೋಮಚ್...' ಅಂತನ್ನುತ್ತ, ಒಮ್ಮೆಗೇ ಏನಾಯಿತೋ ಕಾಣೆ, ಇದ್ದಕ್ಕಿದ್ದಂತೆ ನನ್ನ ಕೆನ್ನೆಗಳನ್ನು ಮುದ್ದಿಸಿದ! ಈಗ ಕೊಸರಿ ಹಿಮ್ಮೆಟ್ಟುವ ಸರತಿ ನನ್ನದಾಯಿತು!!

★★★

ಶ್ರವಣ್, ತಿಂಗಳೊಪ್ಪತ್ತಿಗೆ ಹಿಂದೊಂದು ಮಧ್ಯಾಹ್ನ, ಆಗಂತುಕನ ಹಾಗೆ, 'ಈಶಾವಾಸ್ಯಂ' ಹೊಕ್ಕ. 'ಈಶಾವಾಸ್ಯಂ' ಅಂದರೆ 'ಸೀತಾನದಿ'ಯ 'ಕಡೆಗದ್ದೆ'ಯಲ್ಲಿರುವ ನಮ್ಮ ಮನೆಯ ಹೆಸರು; ನನ್ನದೇ ಹೆಸರು. 'ಈಶಾವಾಸ್ಯಂ ಇದಂ ಸರ್ವಂ...' ಅಂತಂದರೆ, ನಾವು ಮರ್ತ್ಯರು ಅನುಭವಿಸುವ ಇಡೀ ಜಗತ್ತನ್ನು ಮತ್ತು ಜಗದ್ಸೃಷ್ಟಿಯನ್ನು, ಎಲ್ಲರಿಗೂ ಮಿಗಿಲಾದ ಈಶನೆಂಬಾತನು ವ್ಯಾಪಿಸಿಕೊಂಡಿದ್ದಾನೆನ್ನುವ ಅರ್ಥ. ವಾಸ್ಯಂ ಅಂತಂದರೆ, ತುಂಬುವುದು ಅಥವಾ ತುಂಬಿಕೊಳ್ಳುವುದೆಂಬ ಭಾವ... ಈ ಮಲೆನಾಡಿನ ನೆಲ ಮತ್ತು ಆಕಾಶವನ್ನೂ, ಪಸೆ ಹಸಿರುಪಸರನ್ನೂ, ಮಳೆತಂಪಿನುಸಿರನ್ನೂ, ಏಕತ್ರ ಕಣ್ತುಂಬಿಕೊಳ್ಳುವಾಗ ಯಾರಿಗೂ ಹಾಗನಿಸದಿದ್ದೀತೆ? ಎಲ್ಲೆಲ್ಲೂ 'ಆತ'ನೇ ಇದ್ದಾನನಿಸಲೇ ಬೇಕಷ್ಟೆ? ಪರಮ ಸಂತೋಷದ ಅತಿರೇಕವೇ ಪ್ರಕೃತಿಯಲ್ಲಿ ಮೈದಳೆದಂತನಿಸುತ್ತದೆ...

ಇರಲಿ. ಅವೊತ್ತು, ಕನಕದುರ್ಗೆಯ ಸಲುವಾಗಿ ಮೆಡಿಸನು ತರಲಿಕ್ಕೆಂದು ಕೊಪ್ಪಕ್ಕೆ ಹೋದವನು, ವಾಪಸು ಬಂದೆನಷ್ಟೆ, ಪೆಂಟಮ್ಮನ ಏರುದನಿಯ ದೊಂಬಿ ಗೇಟಿನ ಗುಂಟ ಕೇಳಿಬಂತು. ಅವಳ ಕೂಗಾಟದ ಪರಿಯಿಂದಲೇ, ನಮ್ಮ ಜಮೀನೊಳಕ್ಕೆ ಯಾರೋ ಅತಿಕ್ರಮಿಸಿದ್ದಾರೆಂದು ತಿಳಿದುಬಂತು. ಮಲೆನಾಡಿನ ದಟ್ಟ ಗ್ರಾಮ್ಯದ ದಿಟ್ಟನುಡಿಯಲ್ಲಿ, ಹೇಳದೆ ಕೇಳದೆ ಒಳಗೇಕೆ ಮತ್ತು ಹೇಗೆ ಬಂದಿದ್ದೆಂದು, ಬಂದವರನ್ನು, ಪೆಂಟಮ್ಮ ಒಂದೇ ಸಮ ತರಾಟೆ ತಕ್ಕೊಂಡಿದ್ದಳು. ಬಂದಿದ್ದಾತನೇ ಈತ; ಶ್ರವಣ್. ಇವನಿಗೆ ಕನ್ನಡ ಗೊತ್ತಿಲ್ಲ; ಅವಳಿಗೆ ಇವನ ಮಾತು ತಿಳಿಯುತ್ತಿಲ್ಲ. ಪೇಚಾಟವೇ ಮೊದಲಾಗಿತ್ತು! ಇಬ್ಬರೂ ಒಂದೇ ಸಮ ವಾದಕ್ಕಿಳಿದಿದ್ದರು. 'ಓಕೆ... ಓಕೆ... ಸ್ಸ್... ಸ್ಸಾರಿ... ಐ ವಿಲ್ ಗೆಟ್ ಬ್ಯಾಕ್...' ಅಂತಂದು ಇವನು